ಕೇಸಸ್ ಸಾಧಾರಣವಾಗಿ ಒಂದೇ ಇರುತ್ತದೆ. ಮನುಷ್ಯರಿಗೆ ಕಾಯಿಲೆ ಬಂದರೆ ಅವರಿಗೆ ಆಗುವ ನೋವುಗಳನ್ನು ಬಾಯಿಯಲ್ಲಿ ಹೇಳುತ್ತಾರೆ. ಆದರೆ ಮೂಕ ಪ್ರಾಣಿಗಳಿಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಇವರೇ ಊಹಿಸಿ ಚಿಕಿತ್ಸೆ ಮಾಡಬೇಕು ಆದ್ದರಿಂದ ಇವರಿಗೆ ಕಷ್ಟ ಮತ್ತು ಶ್ರಮ ಜಾಸ್ತಿ. ಆದ್ದರಿಂದ ಜಾಸ್ತಿ ಕೊಡದೇ ಇದ್ದರೂ ಇಬ್ಬರಿಗೂ ಸಾಮರಸ್ಯವಿರುವಂತೆ ಸಹಾನುಭೂತಿಯಿಂದ ಮತ್ತೊಮ್ಮೆ ಪರಿಶೀಲಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಡಿಗ್ನಿಟಿ ಆಫ್ ಲೇಬರ್ ಎನ್ನುವ ರೀತಿ ಸೇವೆಯ ಶ್ರಮ ಹೋಲಿಸಿದರೆ, ಯಾವ ಹಂತದಲ್ಲಾದರೂ ಹೆಚ್ಚು ಶ್ರಮ ವಹಿಸುತ್ತಾರೆಂಬ ಹೇಳುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ಆದರೆ ವೆಟರ್‌ನರಿ ಸರ್ವೀಸನ್ನು ಮೆಡಿಕಲ್ ಸರ್ವೀಸ್‌ಗೆ ಹೋಲಿಸಿ ನಂತರ ಇವರ ವೇತನವನ್ನು ಗೊತ್ತು ಮಾಡಿದ್ದಾರೆ. ಆದರೆ ನಾವು ಇಬ್ಬರಿಗೂ ಸರಿಸಮಾನಾಗಿ ಮಾಡಬೇಕೆಂದು ಹೇಳುತ್ತಿದ್ದೀರಿ. ಆದುದರಿಂದ ಇದನ್ನು ನಾವು ಪುನಃ ಪರಿಶೀಲಿಸಲು ಹೊರಟರೆ ಮತ್ತೆ ಅವರಿಂದ ಬೇಡಿಕೆ ಒತ್ತಾಯ ಬರುತ್ತದೆ. ಇದಕ್ಕೆ ಕೊನೆಯೇ ಇರುವುದಿಲ್ಲ. ಜೊತೆಗೆ ಆಯಾಯಾ ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನೋಡಬೇಕೇ ಹೊರತು ಎಲ್ಲವನ್ನೂ ಸರಿಪಡಿಸುತ್ತೇವೆಂದು ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಪುನ: ರೀ ಕನ್ಸಿಡರ್ ಮಾಡುವ ಪ್ರಶ್ನೆ ಇಲ್ಲ... because they will raise an agitation saying that "how you keep us a par with them". As far as aeterinary doctors are concerned, we do not feel, at the present vuncture, that there is any case for reconsideration.

Sanction of Vacant Site to Sri S.P. Mashyal at Mudhol

536 SRI B. N. CHIMMANAKATTI (Badami).— Will the Minister for Revenue and Agriculture be pleased to state :—

(a) whether one Sri S. P. Mashyal of Mudhol had occupied a Govt. vacant site in ward No. V of Mudhol Municipal Jurisdiction illegally and got it entered in his name in City Survey Register.

(b) whether the Revenue Authority *i.e.* Assistant Commissioner Jamakhandi has granted the said site to Sri S. P. Mashyal after getting the Kabulayat from him and recovering the price of the said site ;

(c) if so, whether he had taken permission to transfer the said siet by executing sale deed to one Sri Bijapur, a contractor at Mudhol ;

(d) whether the Government has come to know that the Revenue Authorities have connived with the illegal construction of a new house even though it has been brought to their notice.

(e) what action the Government proposes to take against the man who constructs a house illegally and against the authorities responsible for the loss of revenue to the Government ?

SRI S. BANGARAPPA (Minister for Revenue and Agriculture).—

(a) - (b) Sri S. P. Mashyal of Mudhol has been granted a vacant Goathana site bearing CTS No. 2638 by Asst. Commissioner, Jamakhandi, under his order No. LBP/SR 130 dt. 10.5.1962.

Hence his occupation of the site was legal. The entry in the City Survey records in this behalf is also in order. Original case papers relating to this grant are not traceable, and hence it cannot be verified and stated whether Kabulayat was got executed from the grantee after recovery of the occupancy price.

(c) No.

(d) The Construction of the new house is not illegal. Sri Bijapur has got the plan approved and also obtained permission for the construction of the building from the T.M.C. Mudhol

(e) Does not arise in view of answer to (d) above.

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.— ಅಧ್ಯಕ್ಷರೇ, ನನ್ನ (ಅ) ಪ್ರಶ್ನೆಗೆ ಉತ್ತರದಲ್ಲಿ ಶ್ರೀ ಎಸ್. ಪಿ. ಮುಸಯಾಳ್‌ರವರಿಗೆ ಕಾನೂನು ರೀತಿ ಮಂಜೂರು ಮಾಡಲಾಗಿದೆ ಆದುದರಿಂದ ಅವರು ನಿವೇಶನವನ್ನು ಕಾನೂನು ರೀತ್ಯ ಹೊಂದಿರುತ್ತಾರೆ ಎಂದು ತಿಳಿಸಿದ್ದೀರಿ. ಆದರೆ ಆ ರೀತಿ ಕಾನೂನು ರೀತಿಯಾಗಿದ್ದರೆ ಆದರ ಮೂಲ ಪತ್ರವನ್ನು ಪತ್ತೆ ಹಚ್ಚಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೆ, ಮೂಲ ಪತ್ರವನ್ನು ಪತ್ತೆ ಹಚ್ಚುವುದಕ್ಕೆ ಕ್ರಮ ತೆಗೆದು ಕೊಂಡಿದ್ದೇವೆ, ಆದರೆ ಮಂಜೂರಾತಿ, ರಿಜಿಸ್ಟರ್, ವಗೈರೆ ಸಿಕ್ಕಿಲ್ಲ, ಪತ್ತೆ ಹಚ್ಚುತ್ತಾ ಇದ್ದೇವೆ,

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮುಧೋಲ್ ಟೌನ್‌ನಲ್ಲಿ ಕಟ್ಟಡ ಕಟ್ಟುವುದಕ್ಕೆ ಅನುಮತಿ ಪಡೆದಿದ್ದಾರೆಂದು ಹೇಳಿದ್ದೀರಿ, ಅದಕ್ಕೆ ಯಾವ ವರ್ಷದಲ್ಲಿ ಮಂಜೂರಾತಿ ಕೊಟ್ಟಿದೆ ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.— ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

Murder in Dattatreya Extension in Bangalore

545. SRI P. RAM DEV (Malleswaram).—Will the Chief Minister be pleased to state :—

(a) whether it is a fact that they have failed to detect murderers so far involved in a double murder case last year in Dattatreya Extension of Bangalore City ;

(b) the amount spent by them in this behalf ;

(c) the further action proposed by them in this behalf ?

SRI R. GUNDU RAO (Chief Minister).—

(a) No. Attempts are being made to detect the murderers.

(b) This question does not arise as this is being investigated by the Government.

(c) Separate force has been appointed to detect the murderers and investigation is progressing rapidly.

ಶ್ರೀ ಪಿ. ರಾಮದೇವ್.—ಜೋಡಿ ಕೊಲೆ ನಡೆದದ್ದು ಯಾವಾಗ ? ಅದಕ್ಕೆ ಸಂಬಂಧಪಟ್ಟ ಹಾಗೆ, ಗುಮಾನಿ ಮೇಲೆ ಇಂಟರಾಗೇಟ್ ಮಾಡಿದ್ದೀರಾ ಸ್ವಾಮಿ ?